ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಎಂ. ಎಲ್ ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಣಿಯವರೇ, ತಮ್ಮ ಅಪ್ಪಣೆ ಕೋರಿ ಈ ಒಂದು ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ, ಮತ್ತು ಸಭೆ ಇದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

''ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಉಭಯ ಸದನಗಳ ಜಂಟಿ ಸಮಿತಿಗೆ ಸಂಬಂಧಿಸಿದಂತೆ ಸಮಿತಿಯು ವರದಿಯನ್ನು ಒಪ್ಪಿಸಲು ೧೯೨೨ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ''

ಉಪಾಧ್ಯಕ್ಷಣಿಯವರು:- ಪ್ರಸ್ತಾವನೆ ಈ ರೀತಿ ಇದೆ:-

''ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಉಭಯ ಸದನಗಳ ಜಂಟಿ ಸಮಿತಿಗೆ ಸಂಬಂಧಿಸಿದಂತೆ ಸಮಿತಿಯು ವರದಿಯನ್ನು ಒಪ್ಪಿಸಲು ೧೯೨೨ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ''

<u>ಪ್ರಸ್ತಾವನೆಗೆ ಅನುಮೊದನೆ ನೀಡಲಾಯಿತು ಮತ್ತು ಸಮಿತಿಯ ಕಾಲಾವಧಿ ವಿಸ್ತರಣೆಗೆ ಅನುಮತಿ ದೊರಕಿತು.</u>

ಬೇಡಿಕೆಗಳ ಮೇಲಿನ ಚರ್ಚೆಗಳಿಗೆ ಮಂತ್ರಿಗಳಿಂದ ಉತ್ತರ

ಉಪಾಧ್ಯಕ್ಷಣಿಯವರು:- ಈಗ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ತಮ್ಮ ಉತ್ತರವನ್ನು ಪ್ರಾರಂಭಿಸಬಹುದು.

+ ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು):- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ನನ್ನ ಇಲಾಖೆಯ ಬೇಡಿಕೆಯನ್ನು ಮಂಡಿಸಿದ ಸಂದರ್ಭದಲ್ಲಿ ಮುಖ್ಯವಾಗಿ ಶ್ರೀಯುತರುಗಳಾದ ಶಿವರಾಮೇಗೌಡರು, ಬಾಬುರಾವ್ ಚವಾಣ್‌ರವರು, ಹನುಮೇಗೌಡರು, ಶಫಿ ಅಹಮದ್‌ರವರು ಮತ್ತು ಜಯಚಂದ್ರರವರು ಮಾತನಾಡುತ್ತಾ ಕೆಲವೊಂದು ಸಲಹೆಗಳನ್ನು ಕೂಡ ಸೂಚಿಸಿ ಕೈಗಾರಿಕಾ ಇಲಾಖೆಯಲ್ಲಿರುವ ಕೆಲವು ಲೋಪ-ದೋಷಗಳನ್ನು ಕೂಡ ನಮ್ಮ ಗಮನಕ್ಕೆ ತಂದು ಬೆಳಕನ್ನು ಚೆಲ್ಲಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಪ್ರಪ್ರಥಮ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷಣಿಯವರೇ, ಪ್ರಪ್ರಥಮವಾಗಿ ನಮ್ಮ ಶಿವರಾಮೇಗೌಡರು ಭದ್ರಾವತಿ ಸಕ್ಕರೆ ಕಂಪನಿಯ ೨೫೦ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿ ಅದರಲ್ಲಿ ೨೦೭ ಕಾರ್ಮಿಕರನ್ನು ಪಾಪಸ್ಸು ತೆಗೆದುಕೊಂಡು ೩೩ ಮಂದಿ ಕಾರ್ಮಿಕರನ್ನು ಕೆಲಸದಿಂದ ತೆಗೆದಿದ್ದಾರೆಂದು ಹೇಳಿದ್ದಾರೆ. ಅವರು ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ನಮ್ಮ ಫ್ಯಾಕ್ಟರಿ ಎಂಪ್ಲಾಯೀಸ್ ಅಲ್ಲ ಭದ್ರಾವತಿ ಸಕ್ಕರೆ ಕಾರ್ಖಾನೆಯಲ್ಲಿ ಅವರು ಸಾಧಾರಣವಾಗಿ ಡಿಸೆಂಬರ್‌ನಲ್ಲಿ ಸ್ಟ್ರೈಕ್ ಮಾಡಿದ್ದರಿಂದ ಕಾರ್ಖಾನೆಗೆ ಬಹಳಷ್ಟು ನಷ್ಟವಾಗಿದೆ. ಅಷ್ಟೇ ಅಲ್ಲದೆ